ಅಂತಹ ಎಚ್ಚರ ಇನ್ನೊಬ್ಬರ ಸುಖನಿದ್ರೆಗೂ ಕಾರಣ ಆಗಬಹುದು. ಮನೆಮನೆಗಳಲ್ಲೂ ಅಲ್ಲಲ್ಲಿಗೆ ಬೇಕಾಗಿ ನಿದ್ದೆಗೆಟ್ಟು ಅಥವಾ ಆಯಸ್ಸಿನ ಅಮೂಲ್ಯ ಸಮಯ ಶಕ್ತಿ ವ್ಯಯಿಸಿ ದುಡಿದು ಅವಶ್ಯಕತೆಗಳನ್ನು ಪೂರೈಸುವವರು ಆ ಎಚ್ಚರದ ಸರಳ ಉದಾಹರಣೆಯಾಗಬಲ್ಲರು. ಇನ್ನೂ ಕೆಲವರ ಎಚ್ಚರ, ಮನೆ ಊರನ್ನು ಮೀರಿ ಸುತ್ತಲಿನ ಸಮಾಜಕ್ಕೆ ಉಪಕಾರಿಯಾಗಿರುತ್ತದೆ.

ಅಂತಹವರಲ್ಲಿ ಕೆಲವರು ಬಹುಜನ ಸುಖಾಯ ಹಿತಾಯ ಎಂದು ವಿಶೇಷವಾದುದನ್ನು ಸಾಧಿಸಿ ಇತಿಹಾಸದಲ್ಲಿ, ವರ್ತಮಾನದಲ್ಲಿ ದಾಖಲಾಗಿ ಗುರುತು ಪಡೆಯುತ್ತಾರೆ. ಅವರು ಕಲಾಂರಂತಹ ವಿಜ್ಞಾನಿಗಳೂ ಇರಬಹುದು. ದೊಡ್ಡ ಸಮುದಾಯಕ್ಕೋ ಜಗತ್ತಿಗೋ ನೆರವಾಗುವ ಸಂಶೋಧಕರು, ಅನ್ವೇಷಕರು ಇರಬಹುದು. ಜನನಾಯಕ, ಸಾಹಿತಿ, ಕ್ರೀಡಾಪಟು, ಸಮಾಜಸೇವಕ, ಕಲಾವಿದ, ಸೃಜನಶೀಲ ವ್ಯಕ್ತಿ, ಸಾಹಸಿ ಇನ್ನೂ ಏನೇನೋ. ಮತ್ತೆ ಅವಕಾಶ ವಂಚಿತರಿಗೆ, ಸಮಾಜದ ದೈನಂದಿನ ಆಗುಹೋಗುಗಳಿಗೆ ಅವಶ್ಯಕವಾದ, ಗುರುತಿಸುವಿಕೆಯಲ್ಲಿ ಚಿಕ್ಕದಾದರೂ ಪ್ರಮುಖಎನಿಸುವಕೆಲಸನಡೆಸುವವರಿಗೆ,ಮೂಲಭೂತ ಅಗತ್ಯಗಳನ್ನು ಪೂರ್ತಿಗೊಳಿಸುವುದೇ ದೊಡ್ಡ ಕನಸಾಗಿರುತ್ತದೆ. ಇವರೆಲ್ಲರನ್ನೂ ಅವರವರ ಕಾಲ ಸಂದರ್ಭ, ಅವಕಾಶಗಳ ಹಿನ್ನೆಲೆಯಲ್ಲಿ ಮುನ್ನಡೆಸುವುದು ನಿದ್ದೆಯೊಳಗಿನ ಎಚ್ಚರವೇ.

ಈ ನಿದ್ದೆಯ ಎಚ್ಚರದ ವ್ಯಕ್ತಿಗಳ ಹೆಸರು, ಕ್ಷೇತ್ರ ಯಾವುದಿದ್ದರೂ ಅವರನ್ನು ಅಥವಾ ಅವರ ಬೆನ್ನ ಹಿಂದೆ ಕೆಲಸ ಮಾಡುವ ಪ್ರಜ್ಞೆಯನ್ನು, ರಾತ್ರಿ ಪಾಳಿಯ ಚಾಲಕ ಎಂದು ಕರೆಯಬಹುದು; ತಾವು ಎಚ್ಚರವಿದ್ದು ಪ್ರಯಾಣಿಕರಿಗೆ ನಿದ್ರೆಯ ಜೊಂಪು ಹತ್ತಿಸಿ, ಕಣ್ಣು ಬಿಡುವಾಗ ಇನ್ನೊಂದು ಊರಿಗೆ ತಲುಪಿಸುವವರು, ಯಾತ್ರಿಕರನ್ನು ಗುರಿ ತಲುಪಿಸುವುದರಲ್ಲೇ ತೃಪ್ತಿ ಕಂಡು ಕೊಳ್ಳುವವರು. ಇಲ್ಲಿ ಚಾಲಕ, ವಾಹನ, ಯಾತ್ರಿಗಳು, ರಸ್ತೆ, ರಾತ್ರಿ ಯಾರಿರಬಹುದು ಎನ್ನುವುದು ಅವರವರ ಅನುಭವಕ್ಕೆ ಬಿಟ್ಟದ್ದು. ಎಲ್ಲರೂ ಇಂತಹ ರಾತ್ರಿ ಪಾಳಿಯ ಚಾಲಕರ ಸಹವಾಸ, ಅನುಭವ ಪಡೆದವರೇ.

ಭಾವಾರ್ಥದಲ್ಲೂ, ಶಬ್ದಾರ್ಥದಲ್ಲೂ ರಾತ್ರಿ ಪ್ರಯಾಣದ ಚಾಲಕನೇ ಆದವನೊಡನಿನ ನನ್ನ ಒಂದು ಅನುಭವ ಇಂಜಿನಿಯರಿಂಗ್ ಓದಿನ ದಿನಗಳದ್ದು. ಪದವಿಯ ಕೊನೆಯ ವರ್ಷದಲ್ಲಿದ್ದಾಗ, ಉಷ್ಣ ವಿದ್ಯುತ್ ಸ್ಥಾವರದ ಶೈಕ್ಷಣಿಕ ಭೇಟಿಗೆ ನಾವು ಹೊರಟಿದ್ದೆವು. ನಾವೆಂದರೇನು, ಆ ಕಾಲದ ಕರ್ನಾಟಕದ ಯಂತ್ರಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ಪದವಿ ಪೂರ್ಣಗೊಳ್ಳುವುದೇ ರಾಯಚೂರಿನ ಬಿಸಿಲಿನ ಝಳದಲ್ಲಿ ಒಂದೆರಡು ದಿನಗಳ ಕಾಲ ಬೆಂದು ಬೆವರಿ ನೀರಾದ ಮೇಲೆ. ನಮ್ಮ ಮಟ್ಟಿಗೆ ಆಗ ರಾಯಚೂರಿಗೆ ಪ್ರವೇಶವೇ ಉಷ್ಣ ಸ್ಥಾವರವನ್ನು ಹೊಕ್ಕಂತೆ ಇದ್ದಿತ್ತು. ಬೆಂಗಳೂರಿನಿಂದ ರಾಯಚೂರಿನವರೆಗಿನದು ಇಡೀರಾತ್ರಿಯ ಪ್ರಯಾಣ. ಮೂರು ಖಾಸಗಿ ಬಸ್ಸುಗಳು ಸ್ವಚ್ಛಂದವಾಗಿ ಕೇಕೆ ಹಾಕುವ ವಿದ್ಯಾರ್ಥಿಗಳ ಜೊತೆಗೆ ಪ್ರಾಧ್ಯಾಪಕರನ್ನು ತುಂಬಿಸಿಕೊಂಡು ಹೊರಟಿದ್ದವು. ಒಂದರ ಹಿಂದೆ ಒಂದು. ಒಂದು ಇನ್ನೊಂದನ್ನು ಹಿಂದೆ ಹಾಕುವುದು, ಮುಂದೆ ಸಾಗುವ ಬಸ್ಸಿನಿಂದ ಹರ್ಷೋದ್ಗಾರ ಚಪ್ಪಾಳೆ, ಶಿಳ್ಳೆಗಳು ರಸ್ತೆಯನ್ನು ತುಂಬುವುದು, ಕತ್ತಲೆಯನ್ನು ಅನಾಗರಿಕವಾಗಿ ಬಡಿದು ಎಬ್ಬಿಸುವುದು ನಡೆಯುತ್ತಲೇ ಇತ್ತು. ಈ ನಡುವೆ ನಮ್ಮ ಬಸ್ಸಿನ ಚಾಲಕನಿಗೆ ತೀರಾ ನಿದ್ದೆ ಬರುತ್ತಿತ್ತು. ಬಸ್ಸು ಪ್ರಯಾಣದಲ್ಲಿ ನನ್ನ ಸೀಟು ಎಲ್ಲೇ ಇದ್ದರೂ ರಾತ್ರಿ ಚಾಲಕನ ಕ್ಯಾಬಿನ್ ಒಳಗೆ ಹೋಗಿ ಹತ್ತಿರ ಕುಳಿತು ಮಾತನಾಡುವುದು ನನಗೆ ಇಷ್ಟ. ಇಂಜಿನ್ನಿನ ಕರ್ಕಶ ಸದ್ದು , ಮುಖಕ್ಕೆ ಬಡಿಯುವ ತಂಪು ಗಾಳಿ, ಗಿಯರ್ ಲಿವರ್‌ನ ಅಲುಗಾಟ, ಎದುರಿನಿಂದ ಬರುವ ನಾಲ್ಕು ಆರು ಪ್ರಖರ ಕಣ್ಣುಗಳ ವಾಹನಗಳು, ನಡುವೆ ಹಿಂದೆಂದೂ ಭೇಟಿಯಾಗಿರದ ಮುಂದೆಯೂ ಆಗದ ನನ್ನ ಚಾಲಕನ ನಡುವಿನ ಸುಪ್ರೇಮ ಸಲ್ಲಾಪ. ಈ ಕೆಲಸ ಯಾವಾಗಿನಿಂದ ಎಂದು ಆರಂಭವಾಗುವ ಮಾತುಕತೆ, ಇವತ್ತಿನ ರೂಟ್, ಇದೇ ಹಾದಿಯಲ್ಲಿ ಹಿಂದಿನ ಅನುಭವ, ಸ್ವಲ್ಪದರಲ್ಲಿ ತಪ್ಪಿದ ಅಪಘಾತ, ಸಾವಿನ ದವಡೆಯಿಂದ ಪಾರಾದ ಬಸ್ಸು, ಅವನನ್ನು ಗೋಳುಹೊಯ್ದ ವಿಚಿತ್ರ ಪ್ರಯಾಣಿಕರು ಹೀಗೆ ಮುಂದೆ ಸಾಗಿ ಹೆಂಡತಿ, ಮಕ್ಕಳು, ಸಂಸಾರ, ಶಾಲೆಗಳನ್ನು ಸುತ್ತಿ ಬಳಸಿ ಸಾಗುತ್ತಿದ್ದವು. ಬಸ್ಸಿನ ಜೊತೆಜೊತೆಗೆ. ಅಂದೂ ಚಾಲಕನ ಜೊತೆ ಉತ್ಸಾಹದಲ್ಲಿ ಮಾತುಕತೆ ಶುರು ಆಗಿದ್ದರೂ ನಮ್ಮ ಚಾಲಕನಿಗೆ ಮಾತುಕತೆಯ ನಡುವೆಯೇ ರೆಪ್ಪೆ ಮುಚ್ಚುತ್ತಿತ್ತು. ಆತ ಮಧ್ಯೆಮಧ್ಯೆ ಸೀಟಿನಿಂದ ಆದಷ್ಟು ಎದ್ದು ನಿಂತು, ಎಡಗಾಲಿನ ಮೇಲೆ ಹೆಚ್ಚಿನ ಭಾರ ಬಿಟ್ಟು ಬಲಗಾಲನ್ನು ವೇಗವರ್ಧಕ